ಪಡೆದುಕೊಳ್ಳುವುದು' ಎಂದು ಹೇಳಿದವಳು ಸೋಫಾದ ಮೇಲೆ ಕುಳಿತು, 'ನಿಮ್ಮಲ್ಲಿ ಒಂದು ಪುಟ್ಟ ಫೇವರ್ ಕೇಳ್ಬೇಕು ಅಂತ' ಎಂದು ಇಳಿಬಿದ್ದು ಹರಡಿಕೊಂಡಿದ್ದ ಉದ್ದನೆಯ ಕೂದಲನ್ನು ಮುಡಿಕಟ್ಟಿಕೊಂಡು ಕೇಳಿದ್ದಳು.

'ಕೇಳು, ಇಟ್ಸ್ ಮೈ ಪ್ಲೆಷರ್' ಹೇಳಿದ್ದೆ ನಾನು. ಹರೆಯದ ಸುಂದರ ಹೆಣ್ಣಿನ ಮುಂದೆ ಎಂಥ ಗಂಡಸಾದರೂ ಸೋತು ಹೋಗುವುದು ನಿಸರ್ಗದ ಒಂದು ನಿಯಮವಿರಬಹುದೇನೋ.

'ಕೆ.ಎಮ್. ನಯ್ಯಾರ್ ಅಂಕಲ್ ಕೂಡ ಈ ವಿಷಯವನ್ನು ಪ್ರಸ್ತಾಪಿಸಬಹುದೇನೋ...' ಎಂದವಳು ಮಾತು ನಿಲ್ಲಿಸಿದ್ದಳು. ನಾನು ಎದ್ದು ಹಾಸಿಗೆಯ ಮೇಲೆ ಕುಳಿತು, 'ಹೇಳು, ನನ್ನ ಕೈಲಾಗುವುದಿದ್ದರೆ ಅತ್ಯಂತ ಅಂತಃಕರಣಪೂರ್ವಕವಾಗಿಯೇ ಮಾಡುತ್ತೇನೆ' ಎಂದಿದ್ದೆ.

'ಹೋದ ವರ್ಷ ಆಗಸ್ಟ್ ತಿಂಗಳಲ್ಲಿ ಸಂಭವಿಸಿದ ಜಲಪ್ರಳಯಕ್ಕೆ ಕೇರಳ ತತ್ತರಿಸಿ ಹೋಗಿತ್ತು. ನೂರಾರು ಜನ ಜಲಸಮಾಧಿಯಾಗಿದ್ದರು. ಲಕ್ಷಾಂತರ ಜನ ಮನೆಗಳನ್ನು, ಆಸ್ತಿಪಾಸ್ತಿಗಳನ್ನು ಕಳೆದುಕೊಂಡು ನಿರ್ಗತಿಕರಾದರು. ಸಾವಿರಾರು ಮೈಲಿ ದೂರದ ರಸ್ತೆಗಳು ಹಳ್ಳಕೊಳ್ಳಗಳಾಗಿ ಗುರುತೇ ಹಿಡಿಯದಂತಾಗಿಬಿಟ್ಟಿದ್ದವು. ಕೇಂದ್ರ ಸರ್ಕಾರ ರಾಜ್ಯ ಸರ್ಕಾರಕ್ಕೆ ತಕ್ಷಣ ಸ್ಪಂದಿಸಿ ರಕ್ಷಣಾ ಕಾರ್ಯಗಳಿಗೆ ನೆರವು ನೀಡಿತ್ತು. ಬೇರೆ ಬೇರೆ ರಾಜ್ಯಗಳಿಂದಲೂ ನೆರವು ಹರಿದು ಬಂದಿತ್ತು. ಆದರೆ ನೆರವನ್ನು ನೆರೆ ಪೀಡಿತರಿಗೆ ತಲುಪಿಸಲು ಸಹ ಆಗದಂಥ ಪರಿಸ್ಥಿತಿ ಇತ್ತು. ಆ ಸಂದರ್ಭದಲ್ಲಿ ಕೆ.ಎಮ್. ನಯ್ಯಾರ್ ಅಂಕಲ್ ಐವತ್ತು ಕೋಟಿ ರೂಪಾಯಿಗಳನ್ನು ಮುಖ್ಯಮಂತ್ರಿಗಳ ಫ್ಲಡ್ ರಿಲೀಫ್ ಫಂಡ್‌ಗೆ ಕೊಟ್ಟಿದ್ದರಲ್ಲದೆ, ತಮ್ಮ ನೂರಾರು ಕೆಲಸಗಾರರೊಂದಿಗೆ ಸ್ವತಃ ತಾವೂ ಮುಂದೆ ನಿಂತು ರಿಲೀಫ್ ಕಾರ್ಯಗಳಲ್ಲಿ ಪಾಲ್ಗೊಂಡಿದ್ದರು. ಇದು ನಯ್ಯಾರ್ ಅಂಕಲ್‌ಗೆ ದೊಡ್ಡ ಹೆಸರನ್ನು ತಂದುಕೊಟ್ಟಿತು. ಸಾಮಾನ್ಯರು, ಜನಪ್ರತಿನಿಧಿಗಳು, ಮಾಧ್ಯಮಗಳು ನಯ್ಯಾರ್ ಅಂಕಲರನ್ನು ಇನ್ನಿಲ್ಲದೆ ಕೊಂಡಾಡಿದ್ದವು. ಮೂರು ಜಿಲ್ಲೆಗಳಲ್ಲಿ ಹಾಳಾಗಿಹೋಗಿದ್ದ ರಸ್ತೆಗಳನ್ನು ಮರು ನಿರ್ಮಿಸಲು ಸರ್ಕಾರ ಎರಡು ಸಾವಿರ ಕೋಟಿ ರೂಪಾಯಿಗಳನ್ನು ಅಲಾಟ್ ಮಾಡಿತ್ತು. ಅದರ ಒಟ್ಟು ಗುತ್ತಿಗೆಯನ್ನು ನಯ್ಯಾರ್ ಅಂಕಲ್‌ಗೆ ನೀಡಿತ್ತು. ನಯ್ಯಾರ್ ಅಂಕಲ್ ತಮ್ಮ ಹತ್ತು ಜನ ನಂಬಿಕಸ್ಥರ ಹೆಸರಲ್ಲಿ ಸಮರೋಪಾದಿಯಲ್ಲಿ ಕೆಲಸಗಳನ್ನು ಕೈಗೊಂಡಿದ್ದರು. ಆ ಲಿಸ್ಟಲ್ಲಿ ಅಪ್ಪ, ಭಗವಾನ್ ಕುಟ್ಟಿ, ಸಿಂಧು ಮೆನನ್ ಹೆಸರುಗಳೂ ಇದ್ದವು! ಆರು ತಿಂಗಳಲ್ಲೇ ಕೆಲಸ ಮುಗಿದಿತ್ತು. ಅದರಲ್ಲಿ ಸುಮಾರು ಆರು ನೂರು ಕೋಟಿಗಳಷ್ಟು ಲಪಟಾಯಿಸಲಾಯಿತೆಂದು ಸುದ್ದಿ ಹಬ್ಬಿತ್ತು. ಕೆ.ಎಮ್. ನಯ್ಯಾರ್ ಅಂಕಲ್‌ಗೆ ಇಲ್ಲಿ ಎಲ್ಲಾ ರಾಜಕಾರಣಿಗಳು, ಸರ್ಕಾರಿ ಅಧಿಕಾರಿಗಳು, ಮಾಧ್ಯಮದವರೂ ಹೆದರುತ್ತಾರೆ ಮತ್ತು ಗೌರವಿಸುತ್ತಾರೆ, ತೆರಿಗೆ ಇಲಾಖೆಯವರೂ ಸೇರಿಕೊಂಡು.' ಅವಳು ಮಾತು ನಿಲ್ಲಿಸಿ ಟೇಬಲ್ ಮೇಲಿದ್ದ ಮಿನರಲ್ ವಾಟರ್ ಬಾಟಲಿಯಿಂದ ನೀರು ಕುಡಿದಿದ್ದಳು. ಅವಳು ಏನೋ ಹೇಳಲು ಹೋಗಿ ಮತ್ತಿನ್ನೇನನ್ನೋ ಹೇಳುತ್ತಿರಬೇಕೆಂದು ಅನ್ನಿಸಿತು ನನಗೆ.

'ಸುದ್ದಿ ಆಧರಿಸಿ ಆದಾಯ ತೆರಿಗೆ ಇಲಾಖೆಯವರು ರೈಡ್ ಮಾಡಿದ್ದರು. ಲೆಕ್ಕಾಚಾರಗಳೆಲ್ಲವೂ ಸರಿಯಾಗಿದ್ದವು. ಆದರೆ ಬೆನೆಡಿಕ್ಟ್ ಡಿಸೋಜಾನಿಂದಾಗಿ ಅಪ್ಪ ಸಂಕಷ್ಟಕ್ಕೆ ಸಿಲುಕಿಕೊಂಡಂತಾಗಿದೆ'. ಅವಳು ತಡೆ ತಡೆದು ಹೇಳಿದ್ದಳು.

'ಯಾರದು ಬೆನೆಡಿಕ್ಟ್ ಡಿಸೋಜಾ. ಏನದು ಸಂಕಷ್ಟ?' ಅವಳ ದೇಹದಿಂದ ಸೂರೆಗೊಂಡ ಸುಖದ ಋಣದ ಫಲದಿಂದಾಗಿ ವಿಚಾರಿಸಿಕೊಂಡಿದ್ದೆ.

'ಎರ್ನಾಕುಲಂ ಜಿಲ್ಲೆಯಲ್ಲಲ್ಲದೆ ಪಕ್ಕದ ಕೊಟ್ಟಾಯಂ ಜಿಲ್ಲೆಯಲ್ಲೂ ಫೇಮಸ್ ಆಕ್ಟಿವಿಸ್ಟ್ ಆಗಿದ್ದವನು. ಕಾರ್ಮಿಕ ಮುಖಂಡನಾಗಿದ್ದನಲ್ಲದೆ ಆರ್.ಟಿ.ಐ. ಅಡಿಯಲ್ಲಿ ಅಧಿಕಾರಿಗಳ ಮತ್ತು ರಾಜಕಾರಣಿಗಳ ಭ್ರಷ್ಟಾಚಾರಗಳನ್ನು ಬಯಲಿಗೆಳೆಯುತ್ತಿದ್ದ. ಎಂಜಿನಿಯರಿಂಗ್ ಜೊತೆಗೆ ಎಂಬಿಎ ಮಾಡಿದ್ದವನು ಒಳ್ಳೆಯ ಕೆಲಸ ಸಿಕ್ಕಿದರೂ ಹೋಗದೆ ಸಂಘಟನೆಯಲ್ಲಿ ತೊಡಗಿಸಿಕೊಂಡಿದ್ದ. ಒಳ್ಳೆ ಮಾತುಗಾರ, ಕ್ಷಣಾರ್ಧದಲ್ಲಿ ಮಾತುಗಳಿಂದ ಜನರನ್ನು ಸೂಜಿಗಲ್ಲಿನಂತೆ ಸೆಳೆಯುತ್ತಿದ್ದ. ಮುಂದಿನ ಪಾರ್ಲಿಮೆಂಟ್ ಚುನಾವಣೆಯಲ್ಲಿ ಕೊಟ್ಟಾಯಂನಿಂದ ಸ್ಪರ್ಧಿಸಲು ಎಲ್ಲಾ ಸಂಘಟನೆಗಳೂ ಒತ್ತಾಯಿಸಿದ್ದವು. ಕೆ.ಎಮ್. ನಯ್ಯಾರ್ ಅಂಕಲ್‌ಗೂ ತುಂಬಾನೇ ಪರಿಚಯ. ರಸ್ತೆ ನಿರ್ಮಾಣದ ಕಂಟ್ರಾಕ್ಟ್‌ನಲ್ಲಿ ನಯ್ಯಾರ್ ಅಂಕಲ್ ಭ್ರಷ್ಟಾಚಾರ ನಡೆಸಿರುವುದನ್ನು ಆರ್.ಟಿ.ಐ. ಮೂಲಕ ಮೊದಲು ಬಯಲಿಗೆಳೆದಿದ್ದೇ ಡಿಸೋಜಾ. ಸ್ಪುರದ್ರೂಪಿ. ಎರ್ನಾಕುಲಂನಲ್ಲಿ ನರ್ಸ್ ಆಗಿ ಸೇವೆ ಸಲ್ಲಿಸುತ್ತಿದ್ದಾಗ ಸಿಂಧು ಮೆನನ್‌ಗೆ ಪರಿಚಯವಾಗಿದ್ದನಂತೆ. ಅವರಿಬ್ಬರ ನಡುವೆ ಒಳ್ಳೆಯ ಫ್ರೆಂಡ್‌ಶಿಪ್ ಇತ್ತು. ಎರಡು ವರ್ಷಗಳ ಹಿಂದೆ ಎರ್ನಾಕುಲಂನ ಡಾನ್‌ಬಾಸ್ಕೊ ಕಲ್ಚರಲ್ ಸೆಂಟರ್‌ನಲ್ಲಿ ಸಿಂಧು ಮೆನನಳ ಡ್ಯಾನ್ಸ್ ಪ್ರೋಗ್ರಾಂ ಅರೇಂಜ್ ಮಾಡಿದ್ದ. ಕಲ್ಚರಲ್ ಮಿನಿಸ್ಟರ್ ಬಂದಿದ್ದರಲ್ಲದೆ, ಆಂಧ್ರದಿಂದ ಕ್ರಾಂತಿಕಾರಿ ಕವಿ ಮತ್ತು ಹಾಡುಗಾರ ಗದ್ದರ್ ಕೂಡ ಬಂದಿದ್ದರು. ನಯ್ಯಾರ್ ಅಂಕಲ್ ಮತ್ತು ಅಪ್ಪನನ್ನು ಕೂಡ ಆ ಸಂದರ್ಭದಲ್ಲಿ ಸನ್ಮಾನಿಸಲಾಗಿತ್ತು.

ಅನ್ಯಾಯವನ್ನು ತಕ್ಷಣ ಎದುರುಹಾಕಿಕೊಳ್ಳುತ್ತಿದ್ದ ಡಿಸೋಜಾ, ನಯ್ಯಾರ್ ಅಂಕಲ್‌ರ ರಸ್ತೆ ನಿರ್ಮಾಣದಲ್ಲಾದ ಭ್ರಷ್ಟಾಚಾರ ಕರ್ಮಕಾಂಡದ ವಿರುದ್ಧವೂ ತಿರುಗಿಬಿದ್ದಿದ್ದ. ಅಪ್ಪ, ನಯ್ಯಾರ್ ಅಂಕಲ್ ಮತ್ತು ಪಿಡಬ್ಲ್ಯುಡಿ ಮಿನಿಸ್ಟರ್ ಡಿಸೋಜಾನನ್ನು ಕರೆಸಿ ಬುದ್ಧಿ ಹೇಳಿದ್ದರು. ಅಂದು ನಾನೂ ಇದ್ದೆ. ಬೆನೆಡಿಕ್ಟ್ ಡಿಸೋಜ ಎಲ್ಲರ ಎದುರಿನಲ್ಲಿಯೇ 'ಕಾರ್ಲ್ ಮಾರ್ಕ್ಸ್ ಹೆಸರನ್ನು ಇಟ್ಟುಕೊಂಡಿರುವ ನಿಮಗೆ ಒಂದಿಷ್ಟೂ ನಾಚಿಕೆಯೆಂಬುದೇ ಇಲ್ಲ. ಮೊದಲು ನಿಮ್ಮ ದೇಹದಿಂದ ಆ ಹೆಸರನ್ನು ತೆಗೆದು ಬಿಸಾಕಿ. ದೇಶದ ತುಂಬಾ ನಿಮ್ಮಂಥ ಮುಖವಾಡಗಳನ್ನು ಧರಿಸಿದವರೇ ಸಾರ್ವಜನಿಕ ಬದುಕನ್ನು ನಿರ್ದೇಶಿಸುತ್ತಿದ್ದೀರಿ. ಸಮಾಜಸೇವೆಯ ಹೆಸರಲ್ಲಿ ಸಾಮಾನ್ಯ ಜನರ ರಕ್ತವನ್ನು ಬಸಿದು ಕುಡಿಯುತ್ತಿದ್ದೀರಿ. ಕಾರ್ಮಿಕರು, ಬಡವರು ಒಂದೊಂದು ರೂಪಾಯಿಗೂ ಪರದಾಡುತ್ತಿರುವಾಗ ನೀವು ಕೋಟಿ ಕೋಟಿ ರೂಪಾಯಿಗಳನ್ನು ಸಾರ್ವಜನಿಕ ಯೋಜನೆಗಳ ಹೆಸರಲ್ಲಿ ನುಂಗಿ ನೀರು ಕುಡಿಯುತ್ತಿರುವಿರಿ. ಇಷ್ಟಕ್ಕೂ ಸಂಪತ್ತು ಎಂಬ ಪದಕ್ಕೆ ಅರ್ಥವಾದರೂ ನಿಮಗೇನು ಗೊತ್ತು. ಸಂಪನ್ಮೂಲಗಳನ್ನು ಸಂಪತ್ತನ್ನಾಗಿ ರೂಪಿಸುವವರೇ ಕಾರ್ಮಿಕರು. ಆದರೆ ಅದನ್ನು ನೀವೂ ಸಂಪೂರ್ಣವಾಗಿ ಅನುಭವಿಸದೆ ಕಾರ್ಮಿಕರಿಗೂ ಅನುಭವಿಸಲು ಬಿಡದೆ ಸಂಪತ್ತನ್ನು ಸುಖಾಸುಮ್ಮನೆ ಹಾಳುಗೆಡವುತ್ತೀರಿ. ಬಡವರು ನಿಮ್ಮನ್ನು ಲೂಟಿ ಮಾಡುವ ಸಮಯ ಬಂದೇ ಬರುತ್ತದೆ. ತಯಾರಾಗಿರಿ' ಎಂದು ಕೆ.ಎಮ್. ನಯ್ಯಾರ್ ಅಂಕಲ್‌ರನ್ನು ಕೆಕ್ಕರಿಸಿಕೊಂಡು ನೋಡಿ ಹೇಳಿ ಹೊರಟು ಹೋಗಿದ್ದ.

ಅದಾದ ಹದಿನೈದು ದಿನಗಳಲ್ಲಿ ಒಂದು ದಿನ ಎರ್ನಾಕುಲಂನ ತಮ್ಮ ಫ್ಲಾಟಿನಲ್ಲಿ ಬೆನೆಡಿಕ್ಟ್ ಡಿಸೋಜಾ ಆತ್ಮಹತ್ಯೆ ಮಾಡಿಕೊಂಡಿದ್ದ. ತನಗಾದ ವಿಪರೀತ ಮಾನಸಿಕ ಒತ್ತಡದಿಂದಾಗಿ ಆತ್ಮಹತ್ಯೆ ಮಾಡಿಕೊಳ್ಳುತ್ತಿರುವುದಾಗಿ ಡೆತ್ ನೋಟ್ ಕೂಡ ಬರೆದಿಟ್ಟಿದ್ದ. ಬಿಯರ್ ಜೊತೆಗೆ ಬೊಗಸೆಯಷ್ಟು ನಿದ್ರೆ ಗುಳಿಗೆಗಳನ್ನು ನುಂಗಿ ಆತ್ಮಹತ್ಯೆ ಮಾಡಿಕೊಂಡಿರುವುದಾಗಿ ಪೋಸ್ಟ್ ಮಾರ್ಟಂ ರಿಪೋರ್ಟ್ ಹೇಳಿತ್ತು. ಶವಪರೀಕ್ಷೆ ಮಾಡುವಾಗ ಡಿಸೋಜಾ ಜೇಬಿನಲ್ಲಿ ಅಪ್ಪ ಮತ್ತು ಸಿಂಧು ಮೆನನ್ ಲೈಂಗಿಕ ಕ್ರಿಯೆಯಲ್ಲಿ ತೊಡಗಿರುವ ಮೂರು ಫೋಟೊಗಳು ಪೊಲೀಸರಿಗೆ ಸಿಕ್ಕಿದ್ದವಂತೆ. ಲೋಕಲ್ ಪೊಲೀಸಿನವರದೇನೂ ಪ್ರಾಬ್ಲಂ ಇಲ್ಲ. ಆದರೆ ವಿರೋಧ ಪಕ್ಷಗಳ ಮತ್ತು ಸಂಘಟನೆಗಳ ಒತ್ತಡಕ್ಕೆ ಮಣಿದು ಸರ್ಕಾರ ಕೇಸನ್ನು ಸಿಬಿಐ ತನಿಖೆಗೆ ವಹಿಸಿತು. ಆದರೆ ಸಿಬಿಐನವರಿಗೆ ಆ ಫೋಟೊ ಸಿಕ್ಕಿದೆಯೋ ಇಲ್ಲವೋ ಗೊತ್ತಿಲ್ಲ. ಅಪ್ಪನಿಗೆ ಇನ್ನೂ ಯಾವ ನೋಟಿಸೂ ಬಂದಿಲ್ಲ. ಆದರೆ ನಯ್ಯಾರ್ ಅಂಕಲ್‌ಗೆ ನೋಟಿಸ್ ಬಂದು ದಿಲ್ಲಿಗೆ ಹೋಗಿದ್ದಾರೆ. ಅಂಥ ಸಮಸ್ಯೆಯೇನೂ ಇಲ್ಲವೆಂದು ಫೋನ್ ಮಾಡಿದ್ದರು. ನಾಳೆ ಸಂಜೆ ಬರುವವರಿದ್ದಾರೆ. ಹೇಗಾದರಾಗಲಿ, ಸಿಬಿಐನಲ್ಲಿರುವ ನಿಮ್ಮ ಬ್ರದರ್‌ಗೆ ಒಂದು ಮಾತು ಹೇಳುವುದಾದರೆ ಉಪಕಾರ ಆಗುತ್ತದೆ. ಇಷ್ಟೊತ್ತು ನಿಮ್ಮ ಜೊತೆ ಸುಖ ಹಂಚಿಕೊಂಡಿದ್ದು ನಿಮ್ಮ ಉಪಕಾರಕ್ಕೆ ಪ್ರತ್ಯುಪಕಾರವೆಂದು ಮಾತ್ರ ಭಾವಿಸಬೇಡಿ' ಎಂದು ಹೇಳಿ ಬಾಗಿಲು ತೆರೆದುಕೊಂಡು ಹೊರಟುಹೋಗಿದ್ದಳು ಅರುಂಧತಿ ಪಿಳ್ಳೈ. ನಾನು ಬಾಗಿಲಿನ ಚಿಲಕ ಹಾಕಿ ಹಾಸಿಗೆಯ ಮೇಲೆ ಉರುಳಿಕೊಂಡಿದ್ದೆ. ಆಯಾಸಗೊಂಡವನಂತೆ ಮಂಪರು ಆವರಿಸಿ ನಿದ್ದೆಗೆ ಜಾರಿದ್ದೆ.

ಭಾಗ–5

ಫೋನ್ ರಿಂಗಾಗುತ್ತಿರುವ ಸದ್ದು ಕೇಳಿ ಎಚ್ಚರವಾಗಿತ್ತು. ಫೋನ್ ಎತ್ತಿಕೊಂಡೆ. ಸಮಯ ಏಳು ಗಂಟೆಯಾಗಿತ್ತಲ್ಲದೆ ಕಾಕಿಗಡ್ಡ